MMR MEDIA Since 1975

# MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 ENGLISH DAILY Subscription Yearly - Rs. - MONDAY 28-11-2022

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ಇದುವರೆಗೆ 306 ಲಕ್ಷ ಟನ್ ಭತ್ತ ಖರೀದಿ

ಇದುವರೆಗೆ 2022-23 ಸೀಸನ್‌ನಲ್ಲಿ ಹಿಂದಿನ ವರ್ಷದ ಈ ಅವಧಿಯ 280.51 ಲಕ್ಷ ಟನ್ ಗಳಿಂದ 9 ಶೇಕಡಾ ಅಧಿಕವಾಗಿ 306.06 ಲಕ್ಷ ಟನ್ ಭತ್ತ ಖರೀದಿಯಾಗಿದೆಯೆನ್ನಲಾಗಿದೆ. ಎಫ್.ಸಿ.ಐ ಪಂಜಾಬ್, ಹರಿಯಾಣ ಹಾಗೂ ತೆಲಂಗಾಣಗಳಲ್ಲಿ ಹೆಚ್ಚಿನ ಖರೀದಿ ನಡೆಸಿದೆಯೆನ್ನಲಾಗಿದೆ.

## ಮೆಣಸಿನಕಾಯಿ (ಒಣ) ದರ ಹೆಚ್ಚಳದಲ್ಲೇ ಮುಂದುವರಿಕೆ

ಶೈತಾಗಾರದಲ್ಲಿರುವ ಒಣ ಮೆಣಸಿನಕಾಯಿ ದಾಸ್ತಾನು ಕಡಿಮೆಯೆನ್ನಲಾಗಿದ್ದು, ಈ ವರ್ಷ ಕೆಂಪು ಮೆಣಸಿನಕಾಯಿ ದರ ದಾಖಲೆ ಪ್ರಮಾಣದ ಏರಿಕೆಯಾಗಿದ್ದು, ಇನ್ನೂ ಹೆಚ್ಚಿನ ದರದಲ್ಲೇ ಮುಂದುವರಿಕೆಯಾಗುತ್ತಿದೆ. ಹಿಂದಿನ ವರ್ಷ ಬೆಳೆ ಗಣನೀಯ ಇಳಿಕೆಯಾಗುವುದರಿಂದ ದರ ಹೆಚ್ಚಳವಾಗಿದೆ. ಈ ವರ್ಷ ಬಿತ್ತನೆ ಅಧಿಕವಾಗಿದೆಯೆನ್ನಲಾಗುತ್ತಿದ್ದರೂ ಹೊಸ ಬೆಳೆಯ ಆವಕ ಇನ್ನೂ ಆರಂಭವಾಗಿಲ್ಲ. ಮಧ್ಯಪ್ರದೇಶದಲ್ಲಿ ಬಿತ್ತನೆ ಅಧಿಕವಾಗಿದ್ದು, ಹೊಸಬೆಳೆಯ ಇಳುವರಿ ಕಡಿಮೆಯೆನ್ನಲಾಗಿದ್ದು, ನಿರೀಕ್ಷಿತ ಪ್ರಮಾಣದಲ್ಲಿಲ್ಲವೆನ್ನಲಾಗಿದೆ. ಮುಂದೆ ಕರ್ನಾಟಕ, ಆಂಧ್ರಪ್ರದೇಶ ಹಾಗೂ ತೆಲಂಗಾಣಗಳ ಒಣಮೆಣಸಿನಕಾಯಿ ಕಟಾವು ಆಗಿ ಮಾರುಕಟ್ಟೆಗೆ ಹೊಸ ಬೆಳೆಯ ಆವಕ ಪೂರ್ಣಪ್ರಮಾಣದಲ್ಲಿ ಆರಂಭವಾಗುವ ತನಕ ದರ ಹೆಚ್ಚಳದಲ್ಲಿರುವ ಸಾಧ್ಯತೆಯಿದೆ.

## ಸಕ್ಕರೆ ರಫ್ತು ಬೇಡಿಕೆ ಹೆಚ್ಚಳ

ಜಾಗತಿಕ ಮಾರುಕಟ್ಟೆಯಲ್ಲಿ ಸಕ್ಕರೆ ದರ ಹೆಚ್ಚಳವಿರುವುದರಿಂದ ಭಾರತದ ಸಕ್ಕರೆಗೆ ರಫ್ತು ಬೇಡಿಕೆ ಹೆಚ್ಚಳವಾಗಿದೆಯೆನ್ನಲಾಗಿದೆ.

## ಬಿಗಿ ಪೂರೈಕೆಯಿಂದ ವಿಯೆಟ್ನಾಂ ಅಕ್ಕಿ ರಫ್ತು ದರ ಹೆಚ್ಚಳ

ಅಕ್ಕಿ ಉತ್ಪಾದಕ ದೇಶಗಳ ಬಿಗಿ ಪೂರೈಕೆಯಿಂದ ವಿಯೆಟ್ನಾಂ ಅಕ್ಕಿ ರಫ್ತು ದರ ಹೆಚ್ಚಳವಾಗಿದೆಯೆನ್ನಲಾಗಿದೆ. ಭಾರತದ ಅಕ್ಕಿಯ ರಫ್ತು ದರ ಸ್ಥಿರವಾಗಿದ್ದು, ತೆರಿಗೆ ಸಹಿತವಾಗಿಯೂ ಭಾರತದ ಅಕ್ಕಿ ರಫ್ತು ದರ ಇತರ ದೇಶಗಳ ರಫ್ತು ದರಕ್ಕಿಂತ ಕಡಿಮೆಯಿದೆಯೆನ್ನಲಾಗಿದೆ. ಸರಕಾರದ ವತಿಯಿಂದ ದೇಶೀ ಭತ್ತ ಹೆಚ್ಚಿನ ಪ್ರಯತ್ನ ಪೂರ್ವಕವಾಗಿ ನಡೆಯುತ್ತಿದ್ದು, ಹೆಚ್ಚಿನ ಪ್ರಮಾಣದಲ್ಲಿ ಹೆಚ್ಚಿನ ದರದೊಂದಿಗೆ ಖರೀದಿಯಾಗುತ್ತಿರುವುದರಿಂದ ಖಾಸಗಿ ವರ್ತಕರಿಗೆ ಅಕ್ಕಿ ಲಭ್ಯತೆ ಕಡಿಮೆಯಾಗುವ ನಿರೀಕ್ಷೆ ಇದೆಯೆನ್ನಲಾಗಿದೆ. ಇದರಿಂದ ರಫ್ತು ಇಳಿಕೆಯಾಗುವ ಸಾಧ್ಯತೆಯಿದೆ. ದೇಶಿ ಮಾರುಕಟ್ಟೆಯಲ್ಲಿ ಪೂರೈಕೆ ಸಾಕಷ್ಟಿದೆಯೆನ್ನಲಾಗಿದೆ. ಅಕ್ಕಿ, ಗೋಧಿ ಹಾಗೂ ಮತ್ತಿತರ ಅವಶ್ಯಕ ಸಾಮಾಗ್ರಿಗಳ ದೇಶೀ ದರವನ್ನು ಸರಕಾರ ನಿರಂತರ ಪರಿಶೀಲಿಸುತ್ತಿದೆಯೆನ್ನಲಾಗಿದೆ. ದರದ ಮೇಲೆ ಸರಕಾರದ ನಿಗಾವಿದ್ದು ಕೃತ್ರಿಮ ಹೆಚ್ಚಳ ಕಂಡು ಬಂದರೆ ಸೂಕ್ತ ಕ್ರಮ ಕೈಗೊಳ್ಳಲಿದೆಯೆನ್ನಲಾಗಿದೆ.

## ಪ್ರಮುಖ ಬೆಳೆಗಳ ರಾಬಿ ಬಿತ್ತನೆ ಪ್ರಗತಿ

ನವೆಂಬರ್ 26, 2022 ರ ತನಕ ರಾಬಿ ಬಿತ್ತನೆ ಒಟ್ಟು ಪ್ರದೇಶ 196.57 ಲಕ್ಷ ಹೆಕ್ಟೇರ್ ತಲುಪಿದೆಯೆನ್ನಲಾಗಿದೆ. ಇದರಲ್ಲಿ 67.14 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಕಡ್ಲೆ ಬಿತ್ತನೆ ಮಾಡಲಾಗಿದೆಯೆನ್ನಲಾಗಿದೆ. 11.23 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಮಸೂರ್ ದಾಲ್ ಬಿತ್ತನೆಯಾಗಿದೆಯೆನ್ನಲಾಗಿದೆ. 6.35 ಲಕ್ಷ ಹೆಕ್ಟೇರ್‌ನಲ್ಲಿ ಬಟಾಣಿ, 2.45 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಉದ್ದು, 0.47 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಹೆಸರುಕಾಳು, 1.78 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಇತರ ಬೇಳೆಕಾಳುಗಳು, 15.12 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಜೋಳ, 6.45 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಜೋಳ, 75.77 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ತೈಲಬೀಜಗಳು, (70.89 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಸಾಸಿವೆ, 1.80 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ನೆಲಗಡಲೆ) ಇತ್ಯಾದಿ ಬಿತ್ತನೆಯಾಗಿದೆಯೆನ್ನಲಾಗಿದೆ.